11-00 AM

1. ಸಂತಾಪ ಸೂಚನೆ

ವಿಷಯ: ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಎಸ್.ಕರ್ಜಗಿ ಅವರ ನಿಧನದ ಕುರಿತು.

ಅಧ್ಯಕ್ಷರು: ವಿಧಾನ ಸಭೆಯ ಮಾಜಿ ಸಚಿವರಾಗಿದ್ದ ಶ್ರೀ ವಿ.ಎಸ್.ಕರ್ಜಗಿಯವರು ದಿ:21.2.2009 ರಂದು ನಿಧನರಾಗಿರುವುದನ್ನು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಸಬಯಸುತ್ತೇನೆ. 1935ರ ಮೇ 18ರಂದು ಜನಿಸಿದ ಶ್ರೀಯುತರು ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು, ತುಂಗಭದ್ರಾ ಸಹಕಾರ ಜವಳಿ ಕಾರ್ಖಾನೆ ಹಾಗೂ ರಾಣೆಬೆನ್ನೂರು ಪುರಸಭೆಯ ಅಧ್ಯಕ್ಷರಾಗಿ, ಹಲವಾರು ಸಹಕಾರ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದ ಶ್ರೀಯುತರು 10ನೇ ವಿಧಾನಸಭೆಗೆ ರಾಣೆಬೆನ್ನೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ. [ಸದನವು ಒಂದು ನಿಮಿಷ ಮೌನವನ್ನು ಆಚರಿಸಿತು] ಈ ಸದನವು ಅಂಗೀಕರಿಸಿದ ಸಂತಾಪ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

2. ಪ್ರಕಟಣೆ

(i) **ವಿಷಯ:** ಬೀದರ್ ವಿಧಾನಸಭಾಕ್ಷೇತ್ರದಿಂದ 13ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ವಿಧಾನ ಸಭೆ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿರುವ ಬಗ್ಗೆ-

ಅಧ್ಯಕ್ಷರು: ಬೀದರ್ ವಿಧಾನಸಭಾ ಕ್ಷೇತ್ರದಿಂದ 13ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿಯವರು ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿದ್ದರು, ಸದರಿ ರಾಜಿನಾಮೆಯನ್ನು ದಿ: 4ನೇ ಫೆಬ್ರವರಿ 2009ರಂದು ಅಂಗೀಕರಿಸಲಾಗಿದೆ ಎಂದು ಈ ಮೂಲಕ ಸದನದ ಗಮನಕ್ಕೆತರಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ[ವಿರೋಧಪಕ್ಷದ ನಾಯಕರು]: ಮಾನ್ಯ ಅಧ್ಯಕ್ಷರೆ, ಅವರು ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಏನಾದರೂ ಹೇಳಿದ್ದಾರೆಯೇ?

ಅಧ್ಯಕ್ಷರು: ಯಾವ ಕಾರಣವನ್ನೂ ಹೇಳಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನಾದರು ಖಾಯಿಲೆ ಬಿದ್ದಿದ್ದಾರೆಯೇ?

ಅಧ್ಯಕ್ಷರು: ಅದನ್ನು ಅವರೇ ಹೇಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನು ತೊಂದರೆಯಾಗಿದೆ ಎಂದು ಏನಾದರೂ ಕಾರಣ ಬೇಕಲ್ಲ?

ಅಧ್ಯಕ್ಷರು: ನೀವು ಹೇಳಬೇಕು, ಅವರು ಹೇಳಬೇಕು, ಅವರು ಏನೂ ಕಾರಣವನ್ನು ಹೇಳಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಅವರು ನಿಮ್ಮಲ್ಲಿಗೆ ರಾಜೀನಾಮೆಯನ್ನು ತಂದು ಕೊಟ್ಟಿದ್ದಾರೆ, ನ್ಯಾಚುರಲಿ, ನೀವು resignation ಗೆ ಕಾರಣವನ್ನು ಕೇಳಬೇಕು. ಒಂದು ಯಾವುದಾದರೂ ರಾಜೀನಾಮೆ ಎಂದರೆ, ಏನು ಖಾಯಿಲೆ ಬಿದ್ದಿದ್ದಾರೊ, insane ಇದ್ದಾರೊ, ಎಲ್ಲಿಯಾದರೂ ನಿಮಾನ್ಸ್‌ನಲ್ಲಿ ಅಡ್ಮಿಟ್ ಮಾಡಿದ್ದಾರೊ, ಏನಾದರೂ ಕಾರಣ ಬೇಕಲ್ಲ? ಅದಕ್ಕೆ ಹೋಗಿದ್ದಾರೆಂದರೆ, ಪಾಪ ತೊಂದರೆಯಲ್ಲಿದ್ದಾರೆಂದು ಸಂತೋಷಪಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ[ಇಂಧನ ಸಚಿವರು]: ಕಾಂಗ್ರೆಸ್ ಪಕ್ಷಕ್ಕೆ ಖಾಯಿಲೆ ಬಂದಿದೆ, ಆ ಕಾಂಗ್ರೆಸ್ ಪಕ್ಷ ಯಾವುದೇ ಕಾರಣಕ್ಕೂ ಈ ರಾಜ್ಯವನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ, ಹಾಗಾಗಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ಕಾಂಗ್ರೆಸ್ ಬಿಟ್ಟು ಬೇರೆ ಕಡೆಗೆ ಹೋಗುತ್ತೇನೆಂದು ನನ್ನ ಹತ್ತಿರ ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಖಾಯಿಲೆ ವಾಸಿಯಾಗಬಹುದು, ನಿಮ್ಮಲ್ಲಿರುವ ಖಾಯಿಲೆ ಏಡ್ಸ್ ಇದ್ದಹಾಗೆ, ವಾಸಿಯೂ ಆಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ನಮ್ಮಲ್ಲಿ ಯಾರ್ಯಾರು ಬಂದಿದ್ದಾರೋ ಅವರೆಲ್ಲಾ ಫಸ್ಟ್ ಕ್ಲಾಸ್ ಆಗಿ ಇದ್ದಾರೆ, ನಮ್ಮಲ್ಲಿ ಬಂದವರು ಅವರೂ ಆರೋಗ್ಯವಾಗಿದ್ದಾರೆ, ರಾಜ್ಯವನ್ನು ಆರೋಗ್ಯವಾಗಿಟ್ಟಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ದೇಶದಲ್ಲಿ ಏನೇನು ಖಾಯಿಲೆಗಳಿದ್ದಾವೆ, ಅವೆಲ್ಲಾ ಖಾಯಿಲೆ ಇದ್ದಾವೆಂದು ಗೊತ್ತಿರುವುದರಿಂದ ಆ ಪಾರ್ಟಿಯನ್ನು ಬಿಟ್ಟು ಬಂದಿದ್ದಾರೆ, ಅದನ್ನು ಸಭಾಧ್ಯಕ್ಷರಿಗೆ ಹೇಳಿದ್ದಾರೆ, ನಮಗಂತೂ ಹೇಳಿಲ್ಲ.

ಶ್ರೀ ಯು.ಟಿ.ಖಾದರ್: ನಿಮ್ಮ ಶಾಸಕರಾದ ಸಂಪಂಗಿಯವರ ಆರೋಗ್ಯ ಬಹಳ ಚೆನ್ನಾಗಿದೆ ಎಂದು ಹೇಳಿ.

(ii) **ವಿಷಯ:** ವಿಧಾನ ಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರ ದಸ್ತಗಿರಿ ಬಗ್ಗೆ.

ಅಧ್ಯಕ್ಷರು:– ಇನ್ನೊಂದು ಪ್ರಕಟಣೆ, ದಿ: 13.2.2009ರಂದು ಬೆಳಿಗ್ಗೆ 10.45 ಗಂಟೆಯ ಸಮಯದಲ್ಲಿ ಮೈಸೂರಿನ ಸೆಂಟ್ ಫಿಲೊಮಿನಾ ಕಾಲೇಜಿನ ಆವರಣದಲ್ಲಿ